**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಕೇಶವ ಪ್ರಸಾದ್ ಎಸ್., ಶ್ರೀ ಶಶಿಲ್ ಜಿ. ನಮೋಶಿ, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ., ಶ್ರೀ ಎನ್. ರವಿಕುಮಾರ್, ಶ್ರೀ ಶಾಂತ ರಾಮ ಬುಡ್ನ ಸಿದ್ದಿ, ಶ್ರೀ ಅ. ದೇವೇಗೌಡ, ಡಾ: ವೈ.ಎ. ನಾರಾಯಣಸ್ವಾಮಿ ಹಾಗೂ ಡಾ: ತಲವಾರ ಸಾಬಣ್ಣ, ರವರುಗಳು ನಿಯಮ 330 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ :-**

ಶಿಕ್ಷಣ ಸಂಸ್ಥೆಯಾದ "ಜನಸೇವಾ ಟ್ರಸ್ಟ್, ಬೆಂಗಳೂರು" ಸಂಸ್ಥೆಗೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರಕೆರೆ ಹೋಬಳಿ, ಕುರುಬರಹಳ್ಳಿ ಗ್ರಾಮದಲ್ಲಿ ಈ ಹಿಂದಿನ ಸರ್ಕಾರದಲ್ಲಿ 35 ಎಕರೆ 33 ಗುಂಟೆ ಜಮೀನನ್ನು ಮಂಜೂರು ಮಾಡಿದ್ದು, ಪ್ರಸ್ತುತ ಸದರಿ ಆದೇಶವನ್ನು ತಡೆಹಿಡಿದಿರುವ ಬಗ್ಗೆ.

**ಹೇಳಿಕೆ:-**

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರಕೆರೆ ಹೋಬಳಿ, ಕುರುಬರಹಳ್ಳಿ ಗ್ರಾಮದ ಸ.ನಂ.89ರಲ್ಲಿ 40-20 ಎಕರೆ/ಗುಂಟೆ ಗೋಮಾಳ ಜಮೀನಿನ ಪೈಕಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 15-00 ಎಕರೆ/ಗುಂಟೆ ಜಮೀನನ್ನು ಮತ್ತು ಆಶ್ರಯ ಯೋಜನೆಗೆ 2-00 ಎಕರೆ ಜಮೀನು ಒಟ್ಟು 17-00 ಎಕರೆ ಜಮೀನುಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಮತ್ತು ಆಶ್ರಯ ಯೋಜನೆಗಳಿಗೆ ನೀಡಲಾಗಿರುತ್ತದೆ. ಸದರಿ 17-00 ಎಕರೆ ಜಮೀನು ಕಾಯ್ದಿರಿಸಿರುವುದನ್ನು ರದ್ದುಪಡಿಸಿ, ಉಳಿದ ಖುಲ್ಲಾ 18-33 ಎಕರೆ/ಗುಂಟೆ ಜಮೀನು ಸೇರಿದಂತೆ ಒಟ್ಟು 35-33 ಎಕರೆ/ಗುಂಟೆ ಜಮೀನಿನ ಪೈಕಿ 25-00 ಎಕರೆ "ಗೋಮಾಳ" ಜಮೀನನ್ನು ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡ 25ರಷ್ಟು ಹಾಗೂ ಇತರ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 70 ಎಲ್.ಜಿ.ಬಿ. 2022, ದಿನಾಂಕ:13.09.2022ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಇದಲ್ಲದೆ, ಇದೇ ಗ್ರಾಮದ ಸ.ನಂ.89ರಲ್ಲಿ 10-33 ಎಕರೆ/ಗುಂಟೆ "ಗೋಮಾಳ" ಜಮೀನನ್ನು ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(1)(i)(2) ರನ್ವಯ ಕೃಷಿಯೇತರ ಜಮೀನಿನ ಪ್ರಚಲಿತ ಮಾರುಕಟ್ಟೆ ಮೌಲ್ಯ ಹಾಗೂ ಇತರ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 70 ಎಲ್.ಜಿ.ಬಿ. 2022, ದಿನಾಂಕ: 16.03.2023ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಮೇಲ್ಕಂಡ ಎರಡೂ ಆದೇಶಗಳಲ್ಲಿ ಕೃಷಿಯೇತರ ಜಮೀನಿನ ಪ್ರಚಲಿತ ಮಾರುಕಟ್ಟೆ ಮೌಲ್ಯ ವಿಧಿಸಿರುವುದನ್ನು ಸಡಿಲಿಸಿ, ಸದರಿ ಜಮೀನುಗಳ ಪ್ರಚಲಿತ ಕೃಷಿಯೇತರ ಮಾರ್ಗಸೂಚಿ ಮೌಲ್ಯದ ಶೇಕಡ 5ರಷ್ಟು ಎಂದು ಪರಿಷ್ಕರಿಸಿ ಆದೇಶಿಸಲಾಗಿದೆ.

ಗೋಮಾಳ ಜಮೀನುಗಳ ಮಂಜೂರಾತಿ ಬಗ್ಗೆ ಅನರ್ಹ ಸಂಸ್ಥೆಗಳಿಗೆ ನಿಯಮ ಮೀರಿ ಆಗಿರುವ ಜಮೀನು ಮಂಜೂರಾತಿಗಳ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿದ್ದು, ಪ್ರಚಲಿತ ನಿಯಮಗಳ ಆಧಾರದ ಮೇಲೆ ಮಂಜೂರಾತಿ ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ. ಯಾವುದೇ ನಿರ್ದಿಷ್ಟ ಸಂಸ್ಥೆ ಬಗ್ಗೆ ಅಥವಾ ಅಂತಹ ಸಂಸ್ಥೆಗೆ ಮಂಜೂರಾಗಿರುವ ಜಮೀನಿನ ಬಗ್ಗೆ ಯಾವುದೇ ನಿರ್ದಿಷ್ಟ ಸೂಚನೆ ಇರುವುದಿಲ್ಲ. ಅರ್ಹತೆ, ಮಾನದಂಡ ಮತ್ತು ನಿಯಮಾವಳಿಗಳ ಆಧಾರದ ಮೇಲೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

**(ಸಂಖ್ಯೆ: ಆರ್‌ಡಿ 93 ಎಲ್‌ಜಿಕ್ಯೂ 2023)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು